

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮತದಾನ ಭಿಕ್ಷುಕರಿಗೆ ನೀಡುವ ಕಿಲುಬು ಕಾಸಲ್ಲ!

ಇದೇ ಮೇ 5 ರಂದು ವಿಧಾನ ಸಭಾ ಚುನಾವಣೆ. ಮುಂದಿನ 5 ವರ್ಷಗಳ ಅವಧಿಗೆ ರಾಜ್ಯದ ಜನರು ತಮ್ಮ ಹಣೆಬರೆಹವನ್ನು ನಿರ್ಧರಿಸುವ ಸಂದರ್ಭ. ತರಕಾರಿ ಕೊಳ್ಳುವಾಗ, ಬಟ್ಟೆ ಕೊಳ್ಳುವಾಗ ಅತಿ ಜತನದಿಂದ ಪರೀಕ್ಷಿಸಿ ಜನರು ಕೊಳ್ಳುತ್ತಾರೆ; ಮಗಳಿಗೆ ಗಂಡನ್ನು ಹುಡುಕುವಾಗ ಜಾತಕ, ಮನೆತನ, ಅಂತಸ್ತು ನೋಡಿ ತೂಗಿ ಅಳೆದು ನಿರ್ಧರಿಸುತ್ತಾರೆ. ಆದರೆ ತಾನು, ತನ್ನ ಕುಟುಂಬ, ತನ್ನ ಊರುಕೇರಿ, ತನ್ನ ರಾಜ್ಯ - ಇವೆಲ್ಲವುಗಳ ಯೋಗಕ್ಷೇಮ ನೋಡಿಕೊಳ್ಳುವ ಸರ್ಕಾರದ ಪ್ರತಿನಿಧಿಯನ್ನು ಆರಿಸುವಾಗ ಮಾತ್ರ ಮತದಾರರು ಎಚ್ಚರ ತಪ್ಪುತ್ತಾರೆ. ಆಮಿಷಗಳನ್ನೊಡ್ಡಿ ಕನ್ನ ಹಾಕಿ ಓಟು ಕದಿಯುವ ಖದೀಮರ ಹುನ್ನಾರಗಳಿಗೆ ಜನ ಬಲಿಯಾಗುತ್ತಲೇ ಬಂದಿದ್ದಾರೆ. ಅಭ್ಯರ್ಥಿಗಳು ಕೊಡುವ ಒಪ್ಪೊತ್ತಿನ ಊಟಕ್ಕೆ, ಹಣ ಹೆಂಡಕ್ಕೆ, ಸೀರೆಪಂಚೆಗಳಿಗೆ ತಮ್ಮ ಮತವನ್ನೇ ಮಾರಿಕೊಳ್ಳುವ ಜನರು ಅರ್ಥಮಾಡಿಕೊಳ್ಳಬೇಕಾದ ಮುಖ್ಯ ವಿಷಯವೊಂದಿದೆ. ಇವೆಲ್ಲಾ ಆಮಿಷಗಳನ್ನು ಒಡ್ಡುವವರು ತುಂಬಾ ಜಾಣರು. ಗಾಳದ ತುದಿಯ ಕೊಕ್ಕೆಗೆ ಎರೆಹುಳು ಸಿಕ್ಕಿಸಿ ಮೀನು ಹಿಡಿಯುವ ಜಾಣತನ ಅವರದು. ಎರೆಹುಳುವನ್ನು ತಿನ್ನಲು ಹಾತೊರೆದ ಮೀನು ಗಾಳಕ್ಕೆ ಸಿಕ್ಕಿ ಸಾಯುವಾಗ ಅತ್ತೇನು ಪ್ರಯೋಜನ! ಆಮಿಷಗಳಿಗೆ ಒಳಗಾಗುವ ಮತದಾರರ ಗತಿಯೂ ಅದೇ.

ಚುನಾವಣೆ ಎಂದರೆ ಭ್ರಷ್ಟಾಚಾರವಿರಲೇಬೇಕು ಎಂದೇನೂ ಇಲ್ಲ. ಆದರೆ ಈಗ ಹಾಗೆ ಆಗಿಬಿಟ್ಟಿದೆ. ಇಂಥ ವಿಷಮ ಸನ್ನಿವೇಶದಲ್ಲಿ ಮತದಾರರು ಜಾಗೃತರಾಗಬೇಕು. ಚುನಾವಣೆಯಲ್ಲಿ ಹಣ ಮತ್ತು ಹೆಂಡದ ಹೊಳೆ ಹರಿಸಿದರೆ ಜನ ಓಟು ಕೊಡುತ್ತಾರೆ ಎನ್ನುವ ಭಾವನೆ ಎಲ್ಲಿಯತನಕ ಇರುತ್ತದೋ ಅಲ್ಲಿಯ ತನಕ ಭ್ರಷ್ಟಾಚಾರ ತಪ್ಪುವುದಿಲ್ಲ. ಮಹಿಳಾ ಮತದಾರರು ಚುನಾವಣೆಯಲ್ಲಿ ಅಭ್ಯರ್ಥಿಗಳು ಹಂಚುವ ಸೀರೆಗಳಿಗೆ ಕೈಯೊಡ್ಡಿ ತೆಗೆದುಕೊಳ್ಳುವುದಂತೂ ತುಂಬಾ ಅವಮಾನಕರ. ಸೀರೆಯನ್ನು ತನಗೆ ತಂದುಕೊಡಬೇಕಾದವನು ಗಂಡ, ಸೀರೆಯುಡಿಸಿ ಮಡಿಲಿಗೆ ಅಕ್ಕಿಯನ್ನು ತುಂಬಬೇಕಾದವರು ತವರು ಮನೆಯವರು. ಅದನ್ನು ಬಿಟ್ಟು ಯಾರೋ ಕದ್ದುಮುಚ್ಚಿ ತಂದುಕೊಟ್ಟ ಸೀರೆಯನ್ನು ಉಟ್ಟುಕೊಳ್ಳುವುದರಿಂದ ಮಾನಗೇಡಿಗಳಾಗುತ್ತೇವೆಂದು ಮಹಿಳೆಯರು ಅರ್ಥಮಾಡಿಕೊಳ್ಳಬೇಕು. ತಮ್ಮ ಚಾರಿತ್ರ್ಯಕ್ಕೇ ಧಕ್ಕೆ ಎಂದು ತಿರಸ್ಕರಿಸಬೇಕು. ಚುನಾವಣೆಯಲ್ಲಿ ಸೀರೆ ಹಂಚಲು ಬರುವವರನ್ನು ಅವರೇ ಹಿಡಿದು ಶಿಕ್ಷಿಸುವಂತಾಗಬೇಕು. ಇಲ್ಲದಿದ್ದರೆ 'ಆಚಾರಕ್ಕೆ ಅರಸಾಗು, ನೀತಿಗೆ ಪ್ರಭುವಾಗು' ಎಂದು ತಮ್ಮ ಮಕ್ಕಳಿಗೆ ಬೋಧಿಸುವ ನೈತಿಕ ಶಕ್ತಿಯನ್ನೇ ತಾಯಂದಿರು ಕಳೆದುಕೊಳ್ಳುತ್ತಾರೆ.

ಇದಕ್ಕೆಲ್ಲ ಮೂಲ ಕಾರಣ ಮನುಷ್ಯನ ಭ್ರಷ್ಟತೆ ಮತ್ತು ಅಧಾರ್ಮಿಕ ನಡವಳಿಕೆ. ಚುನಾವಣಾ ಅಕ್ರಮಗಳನ್ನು ತಡೆಯಲು ಕಾನೂನುಗಳೇನೋ ಮೊದಲಿಂದಲೂ ಇದ್ದವು. ಆದರೆ ಅವುಗಳ ಅನುಷ್ಠಾನ ಕಟ್ಟುನಿಟ್ಟಾಗಿ ಜಾರಿಗೆ ಬಂದಿದ್ದು ಮಾತ್ರ ಶೇಷನ್ ಕಾಲದಲ್ಲಿ. ರಾಜಕಾರಣಿಗಳಿಗೆ ಸಿಂಹಸ್ವಪ್ನವಾಗಿದ್ದ ಅವರು ಅಕ್ರಮವೆಂಬ ಗೂಳಿಯನ್ನು ಹಿಡಿದು ಬಗ್ಗಿಸಿ ಮೂಗುದಾರ ಹಾಕಿದರು. ಅಂತಹ ಶೇಷನ್ ಕೂಡ ನಿವೃತ್ತಿಯ ನಂತರ ರಾಜಕೀಯಕ್ಕೆ ಇಳಿದು ನಾಮಾವಶೇಷವಾಗಿದ್ದು ಒಂದು ದುರಂತವೇ ಸರಿ. ಈಗ ಚುನಾವಣೆಗಳೆಂದರೆ ಶೇಷನ್ ಪೂರ್ವದ ಅಬ್ಬರ, ಡೌಲು, ದೌಲತ್ತು, ಓಡೆ ಬಜಾವಣೆಗಳಿಲ್ಲ. ಆದರೆ ಭ್ರಷ್ಟಾಚಾರ ಮಾತ್ರ ಎಲ್ಲ ಅಡೆತಡೆಗಳ ಮಧ್ಯೆ ಗುಪ್ತಗಾಮಿನಿಯಾಗಿ ಹರಿಯುತ್ತಲೇ ಇದೆ; ತನ್ನ ಕಬಂಧಬಾಹುಗಳನ್ನು ಬಳಸಿ ಸಮಾಜವನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ.

ನಮ್ಮ ದೇಶದ ಜನರು ಒಳ್ಳೆಯವರೇ. ಅವರ ಒಳ್ಳೆಯತನವನ್ನು ಚುನಾವಣೆಗಳು ತಿಂದುಹಾಕುತ್ತಿವೆ. ಜನರಲ್ಲಿ ಒಳ್ಳೆಯತನವನ್ನು ಜಾಗೃತಗೊಳಿಸುವ ಪ್ರಯತ್ನ ಅನೇಕರಿಂದ ನಡೆಯುತ್ತಲೇ ಇದೆ. ಆದರೆ ಚುನಾವಣೆ ಬಂತೆಂದರೆ ಸಾಕು ಈ ಎಲ್ಲ ಪ್ರಯತ್ನಗಳೂ ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎನ್ನುವಂತಾಗಿದೆ. ಬಹುಕಾಲ ಕಷ್ಟಪಟ್ಟು ಮಾಡಿದ ಕಾರ್ಯವೆಲ್ಲವೂ ಚುನಾವಣೆಯ ಸಂದರ್ಭದ ಕೆಲವೇ ದಿನಗಳಲ್ಲಿ ನಿರ್ನಾಮವಾಗಿ ಬಿಡುತ್ತದೆ.

ಭಾರತದಲ್ಲಿ ಹಿಂದೆ ಯುದ್ಧಗಳನ್ನು ಧರ್ಮಯುದ್ಧಗಳೆಂದು ಕರೆಯುತ್ತಿದ್ದರು. ಅದರ ಪ್ರಕಾರ ಬೆನ್ನ ಹಿಂದಿನಿಂದ ಇರಿಯುವಂತಿರಲಿಲ್ಲ, ಶಸ್ತ್ರವಿಲ್ಲದವನನ್ನು ಕೊಲ್ಲುವಂತಿರಲಿಲ್ಲ, ಕತ್ತಲಾದ ಮೇಲೆ ಯುದ್ಧ ಮಾಡುವಂತಿರಲಿಲ್ಲ. ಆದರೆ ಈಗಿನ ಯುದ್ಧಗಳು ಧರ್ಮಯುದ್ಧಗಳಾಗಿ ಉಳಿದಿಲ್ಲ. ಗೆಲ್ಲುವುದಕ್ಕಾಗಿ ಎಂತಹ ಕುತಂತ್ರಗಳನ್ನೂ ಸಹ ಮಾಡಲಾಗುತ್ತದೆ. ಹಾಗೆಯೇ ಚುನಾವಣೆ ಎಲ್ಲ ಕುತಂತ್ರಗಳ ರಣರಂಗವಾಗಿದೆ. ಎದುರಾಳಿಯನ್ನು ತನ್ನ ಹಣ ಬಲದಿಂದ ಹಣಿಯುವ ಹಣಾಹಣಿಯಾಗಿದೆ. "An Election is a moral horror as bad as a battle" ಎನ್ನುತ್ತಾರೆ ಜಾರ್ಜ್ ಬರ್ನಾಡ್ ಶಾ.

ಸಾಂಸಾರಿಕ ಜೀವನದಿಂದ ಬೇಸತ್ತ ಬಸವಣ್ಣನವರು 'ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ, ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ' ಎಂದು ವಿಷಾದಿಸಿದ್ದಾರೆ. ಇದೇ ಮಾತನ್ನು ಮುಂದುವರಿಸಿ ಭಾರತಕ್ಕೆ ಮಧ್ಯರಾತ್ರಿಯಲ್ಲಿ ಬಂದ ಸ್ವಾತಂತ್ರ್ಯವೆಂಬ ಹುಣ್ಣಿಮೆಯ ಚಂದಿರನನ್ನು ಇಂದಿನ ಭ್ರಷ್ಟ ರಾಜಕೀಯ ನುಂಗಿ ನೀರುಕುಡಿಯುತ್ತಿದೆ ಎಂದು

ಹೇಳಬಹುದು. ಇದಕ್ಕೆ ಕಡಿವಾಣ ಹಾಕುವುದು ಅತಿ ತುರ್ತು; Now or never ಎಂಬಂತಹ ಹೋರಾಟ ಅಗತ್ಯವಾಗಿದೆ.

ಮತದಾನ ಭಿಕ್ಷುಕರಿಗೆ ನೀಡುವ ಕಿಲುಬು ಕಾಸಲ್ಲ; ಮತ ಭಿಕ್ಷೆ ಬೇಡುವ ರಾಜಕಾರಣಿಗಳು ಭಿಕ್ಷುಕರಲ್ಲ, ಬಂಡವಾಳಶಾಹಿಗಳು. ಅವರು ಚುನಾವಣೆಗೆ ಖರ್ಚು ಮಾಡುವುದು ವ್ಯಾಪಾರ ಉದ್ದಿಮೆಗಳಲ್ಲಿ ಬಂಡವಾಳ ಹಾಕಿದಂತೆ. ಮತದಾನ ವಾಸ್ತವವಾಗಿ ದಾನವಲ್ಲ, ಅದೊಂದು ಗುರುತರ ಹೊಣೆಗಾರಿಕೆ. ಅದನ್ನು ದಾನವೆಂದು ಭಾವಿಸಿದರೂ ಸಹ ದಾನಕ್ಕೆ ಒಂದು ಧಾರ್ಮಿಕ ಅರ್ಥವಿದೆ. ಅದನ್ನು ಪ್ರತಿಫಲ ಪಡೆದು ಮಾಡಬಾರದು. ಹಾಗೆ ಮಾಡಿದರೆ ಅದು ದಾನವೆನಿಸಿಕೊಳ್ಳುವುದಿಲ್ಲ; ಕೊಡುಕೊಳ್ಳುವ ವ್ಯಾಪಾರವಾಗುತ್ತದೆ. ಅನ್ನದಾನ, ವಸ್ತ್ರದಾನ, ವಿದ್ಯಾದಾನ, ಕನ್ಯಾದಾನಗಳನ್ನು ಸತ್ಪಾತ್ರರಿಗೆ ತಾನೆ ಮಾಡುವುದು. ಹಾಗೆ ಮತದಾನವನ್ನೂ ಸತ್ಪಾತ್ರರಿಗೆ, ಯೋಗ್ಯರಿಗೆ ಮಾಡಬೇಕು. ಹಾಗೆ ಮಾಡದಿದ್ದರೆ ಬಡವನಾದವನು ತನ್ನಲ್ಲಿ ಹಣವಿಲ್ಲವೆಂದು ಶ್ರೀಮಂತನಾದ ಮುದುಕನಿಗೆ ಮಗಳನ್ನು ಧಾರೆ ಎರೆದುಕೊಟ್ಟು ಮುಂದೆ ಕಿರುಹರೆಯದಲ್ಲಿಯೇ ವಿಧವೆಯಾದ ಮಗಳನ್ನು ನೋಡಿ ಎದೆಬಡಿದುಕೊಂಡು ಅತ್ತಂತಾಗುತ್ತದೆ.

ಮತದಾನವನ್ನು ಎಲ್ಲರೂ ತಪ್ಪದೇ ಮಾಡಬೇಕು. ಮತದಾನ ಪ್ರಜೆಗಳ ಪರಮಾಧಿಕಾರ. ಅದನ್ನು ಜಾಣತನದಿಂದ ಚಲಾಯಿಸಿ ತಮಗೆ ಬೇಕಾದಂತಹ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಎಲ್ಲರಿಗೂ ಇರುತ್ತದೆ. ಈಗ ಯಾವ ಪಕ್ಷದಲ್ಲಿಯೂ ನೀತಿ ಸಿದ್ಧಾಂತಗಳಿಲ್ಲ, ಆದ್ದರಿಂದ ಪಕ್ಷವನ್ನು ನೋಡಿ, ಜಾತಿಯನ್ನು ನೋಡಿ ಮತದಾನ ಮಾಡುವ ಮನೋಭಾವ ಹೋಗಬೇಕು. ನಿಂತಿರುವ ಅಭ್ಯರ್ಥಿಗಳಲ್ಲಿ ಒಳ್ಳೆಯವರು ಯಾರೆಂದು ನೋಡಿ ಮತದಾನ ಮಾಡಬೇಕು. ಒಳ್ಳೆಯವರಾರೂ ಇಲ್ಲವೆಂದರೆ ನಿಂತವರಲ್ಲಿಯೇ ಕಡಿಮೆ ಭ್ರಷ್ಟರನ್ನು ಆಯ್ಕೆ ಮಾಡದೆ ಬೇರೆ ವಿಧಿಯಿಲ್ಲ, ಕುರುಡುಗಣ್ಣಿಗಿಂತ ಮೆಳ್ಳೆಗಣ್ಣು ಮೇಲಲ್ಲವೆ! ಒಂದು ವೇಳೆ ನಿಂತವರಲ್ಲಿ ಯಾರಿಗೂ ಮತಹಾಕಲು ಇಷ್ಟವಿಲ್ಲದಿದ್ದರೂ ಮತಗಟ್ಟೆಗೆ ಖಂಡಿತಾ ಹೋಗಬೇಕು. ಮತಗಟ್ಟೆ ಅಧಿಕಾರಿಗೆ ತನಗೆ ಮತದಾನ ಮಾಡಲು ಇಷ್ಟವಿಲ್ಲವೆಂದು ಹೇಳಿ ಅವರಲ್ಲಿ ದಾಖಲಿಸಬೇಕು.

ಮತದಾನವನ್ನು ಪೂಜೆಯಷ್ಟೇ ಪವಿತ್ರ ಕಾರ್ಯ ಎಂದು ಭಾವಿಸಿದ್ದವರು ನಮ್ಮ ಲಿಂಗೈಕ್ಯ ಗುರುವರ್ಯರು. ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ನಾವೂ ಮತದಾನ ಮಾಡುತ್ತಾ ಬಂದಿದ್ದೇವೆ. ನೀವೂ ತಪ್ಪದೆ ಮಾಡಿ. ಈ ನಾಡಿನ ಭವಿತವ್ಯ ನಿಮ್ಮ ಕೈಯಲ್ಲಿದೆ.

**2.5.2013**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**